ಎಂದು ಫಾತಿಮಾ ಕೇಳಿದೊಡನೆಯೇ ಯಾವುದೋ ಗುಂಗಿನಿಂದ ಥಟ್ಟನೆ ಎಚ್ಚರಗೊಂಡವಳಂತೆ, ‘ಪುರುಷೋತ್ತಮ...’ ಎಂದು ಹೇಳಿದ್ದಳೋ ಅಷ್ಟರಲ್ಲಾಗಲ್ಲೇ, ‘ಇವನ ಹೆಸರೂ ಪುರುಷೋತ್ತಮನೇಯಾ?’ ಎಂದು ಫಾತಿಮಾ ಬಾಯೊಡೆದು ಕೇಳಿಯಾಗಿತ್ತು.

‘ಅಲ್ವೇ, ಸುಧಾಕರ ಹೇಳಿ ಬರ್ದೀರ್ ಫಾತಿ. ನಿಂಗೆ ಮಂಗಲ ಪತ್ರ ಕೊಟ್ಟು ಕರೆದದ್ದೇ ಅಲ್ವೇನೇ, ಹೆಸ್ರು ಸರಿ ನೋಡಿ ಬರುವುದಲ್ಲವಾ?’ ಇರುಸುಮುರುಸುಗೊಂಡ ಮಹೇಶ್ವರಿ ಅಲ್ಲೇ ನಲ್ಲಿಯ ಕೆಳಗಿದ್ದ ಹಾಲಿನ ಬೋಗಣಿಯನ್ನು ತಿಕ್ಕುತ್ತಾ ಮಗಳನ್ನು ತಿದ್ದಿದರು.

‘ಇವಳಿಗೆ ಇನ್ನೆಷ್ಟು ತಿದ್ದಿ ಬುದ್ಧಿ ಹೇಳುವುದೋ, ಎಲ್ಲಾ ಮುಳುಗಿ ಹೋಯ್ತು ಅಂತ ಎಷ್ಟು ದಿನ ಆಕಾಶವನ್ನು ತಲೆಮೇಲೆ ಹೊತ್ತು ಓಡಾಡಲು ಸಾಧ್ಯ. ಇಂದಲ್ಲ ನಾಳೆ ತಲೆಯ ಮೇಲಣ ಹೊರೆಯನ್ನು ಕೆಳಗಿಳಿಸಲೇ ಬೇಕು.’ ಶಾರಿಗೆ ಕೇಳಿಸಲಿಕ್ಕಾಗೇ ಕಟಗುಡತೊಡಗಿದ್ದಳು ಮಹೇಶ್ವರಿ.

ಇಂತಹ ಎಲ್ಲಾ ಸುತ್ತು ಬಳಸಿ ಆಡುವ ಮಾತುಗಳು ಶಾರಿಯ ಮುಖದಲ್ಲಿನ ಭಾವನೆಗಳನ್ನು ಮಾತ್ರ ಬದಲಾಯಿಸಲು ಸೋತಿದ್ದವು.

ಖಾಲಿ ಜಾಗವನ್ನು ಹದ ಮಾಡಿ ಹೊಸ ಮನೆಯನ್ನು ನಿರ್ಮಿಸುವುದು ಕಷ್ಟವೇನಲ್ಲ. ಆದರೆ ಹಳೆಯ ಮನೆಯನ್ನುರುಳಿಸಿ ಅಲ್ಲಿ ಬಂಗಲೆಯನ್ನೇ ಕಟ್ಟಿದರೂ ಮನೆಯೊಳಗಿದ್ದ ನಗು, ಕಾಲಿಗೆ ತಡಸಣೆಯಂತೆ ಹರಡಿಬಿದ್ದ ಆಟಿಕೆ, ಹೊಗೆಯ ಕಮಟಿಗೆ ಬಚ್ಚಲು ಮನೆಯಲ್ಲಿ ಒಣಗುತ್ತಿದ್ದ ಪರಕಾರಗಳನ್ನೆಲ್ಲ ಮರೆಯಲು ಸಾಧ್ಯವೇ? ಪುರುಷೋತ್ತಮನಿದ್ದ ಮನದಲ್ಲಿ ಸುಧಾಕರ ನೆಲೆ ನಿಲ್ಲಲು ಬರುತ್ತಿದ್ದಾನೆ ಎಂದು ಕಲ್ಪಿಸಿಕೊಳ್ಳುವುದು ಸುಲಭವೆನಿಸಲಿಲ್ಲ ಶಾರಿಗೆ.

ಪುರುಷೋತ್ತಮನೊಂದಿಗಿನ ಬದುಕನ್ನು ನೆನಪಿಸುವ ಶಾರಿಯ ಎಲ್ಲಾ ವಸ್ತುಗಳನ್ನು ಮರೆ ಮಾಡಲಾಗಿತ್ತು. ಕೆಂಪು ಸೀರೆಯ ಮೇಲೆ ಎಳೆಬಾಳೆಯ ಬಣ್ಣದ ಉತ್ತರೀಯ ತೊಟ್ಟ ಶಾರಿ ಎಂಬ ಮದುವಣಗಿತ್ತಿಯನ್ನು ಎಂಟು ವರ್ಷಗಳ ಹಿಂದೆ ಖುದ್ದು ರಾಜು ಮಾವನೇ ಎತ್ತಿಕೊಂಡು ಹಸೆಮಣೆವರೆಗೆ ಕರೆ ತಂದದ್ದು, ಅದರ ಫೋಟೊದಿಂದ ಹಿಡಿದು, ಪುರುಷೋತ್ತಮ ಸಾಯುವ ಹಿಂದಿನ ದಿನ ತೆಗೆಸಿಕೊಂಡ ಫೋಟೊವನ್ನು ಕೂಡ ಇಲ್ಲವಾಗಿಸಿದ್ದರು. ಶಾರಿಯ ಬಾಳಂತನದಲ್ಲಿ ಅವ ಬರೆದ ಕಾಗೆಕಾಲು ಗುಬ್ಬಿಕಾಲಿನ ಅಕ್ಷರದ ಚುಟುಕು ಪತ್ರ, ಅವ ಕೊಡಿಸಿದ ಸೀರೆ... ಬಹುಶಃ ಮದುವೆಯ ಮರುದಿನ ಮನೆಯ ತೊಲೆಗೆ ಹಿಂದೆ ಕಟ್ಟಿದ್ದ ಶಾರಿ –ಪುರುಷೋತ್ತಮರ ಮದುವೆಯ ಬಾಸಿಂಗವನ್ನೂ ತೆಗೆದಿರಬಹುದು ಮೂರ್ಕೋಡ್ಲಿನಲ್ಲಿ. ಇವರೆಲ್ಲರ ಲೆಕ್ಕದಲ್ಲಿ ನೆನಪನ್ನು ಮರೆಯಲು ಇರುವ ಸುಲಭ ಔಷಧಿ ಅವನಿಗೆ ಸಂಬಂಧಪಟ್ಟಿದ್ದನ್ನೆಲ್ಲ ತೆಗೆದು ಒಗೆದುಬಿಡು, ಇಲ್ಲಾ ಸುಟ್ಟುಬಿಡು. ತನ್ನ ಮಕ್ಕಳ ನೆನಪಾಗಿ ಮತ್ತೆ ನೀರಾದಳು ಶಾರಿ.

ಶಾರಿ... ವಿಚಿತ್ರ ಶಾರಿಯ ಬಗ್ಗೆ ಹೇಳಿದರೂ ಏನಂತ ಹೇಳುವುದು!

ಕಾಲೇಜು ಮುಗಿಯುತ್ತಿದ್ದಂತೆಯೇ ಅಪ್ಪ ಜಾತಕ ಹೊರಹಾಕಿದ, ಶಾರಿಗೆ ಮುಂದೆ ಓದಬೇಕೆಂಬ ಮನಸ್ಸು ಸ್ವಲ್ಪ ಇದ್ದಂತಿದ್ದರೂ ಮದುವೆಯೇನು ಬೇಡ ಅಂತಿರಲಿಲ್ಲವಾದ್ದರಿಂದ ಮದುವೆಗೆ ಖುಷಿಯಾಗಿಯೇ ಒಪ್ಪಿದ್ದಳು. ಅಪ್ಪ ಮಗಳು ಒಪ್ಪಿದರೆ ಸಾಕೇ, ಶಾರಿಯ ಅಪ್ಪ ಶಂಬಣ್ಣನ ಶರತ್ತುಗಳಿಗೆ ತಕ್ಕಂತಹ ಗಂಡು ಸಿಗಬೇಡವೇ!

ಒಬ್ಬನೇ ಇರುವ ಮಗನಾಗಿರಬಾರದು, ಯಾಕೆಂದರೆ ತಂದೆ ತಾಯಿಯ ಜವಾಬ್ದಾರಿಯನ್ನು ತನ್ನ ಅಳಿಯನೊಬ್ಬನೇ ಹೊರುವುದಕ್ಕೂ ನಾಲ್ಕು ಮಕ್ಕಳು ಸೇರಿ ಹೊರುವುದಕ್ಕೂ ವ್ಯತ್ಯಾಸವಿರುತ್ತದೆ ಅಲ್ಲವೇ. ಶಂಬಣ್ಣನಿಗಿನ್ನೂ ಸಿಗದ ಅಳಿಯನ ಮೇಲೆ ಪ್ರೀತಿ ಅಂತಲ್ಲ, ಮಗಳ ಮೇಲೆ ಅತ್ತೆ ಮಾವನ ಭಾರ ಅತಿಯಾಗಿ ಬಿದ್ದರೆ ಎಂಬ ಸಣ್ಣ ದೂರಾಲೋಚನೆ. ಅದಷ್ಟೇ ಅಲ್ಲ,